**MAY 14, 2026**

**AKASHAVANI - DHARWAD**

**PRADESH SAMACHARA (KANNADA) 12.00 P.M.**

<><><>

**ಪ್ರಸಾರ ಭಾರತಿ, ಆಕಾಶವಾಣಿ**

**ಧಾರವಾಡ**

**ಪ್ರದೇಶ ಸಮಾಚಾರ**

<><><>

**ಮೈಸೂರನ್ನು ಯೋಗ ಜಿಲ್ಲೆ ಎಂದು** ಘೋಷಿಸಲು, ಕೇಂದ್ರ ಸರ್ಕಾರ ಅನುಮೋದಿಸಿದೆ. ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ಖಾತೆ ಸಚಿವ, ದಿನೇಶ ಗುಂಡೂರಾವ, ಬೆಂಗಳೂರಿನಲ್ಲಿ ಈ ವಿಷಯ ತಿಳಿಸಿದರು. 'ಆರೋಗ್ಯ, ಜ್ಞಾನ ಮತ್ತು ವಿಶ್ವ ಶಾಂತಿಗಾಗಿ ಯೋಗ' ಎಂಬ, ಪರಿಕಲ್ಪನೆಯಡಿ, ಆಯುಷ್ ಇಲಾಖೆ, ಬೆಂಗಳೂರಿನ ವಿಧಾನಸೌಧದ ಆವರಣದಲ್ಲಿ, ಜೂನ್ 21 ರಂದು, ಬೆಳಗ್ಗೆ 6 ರಿಂದ, 8 ಗಂಟೆ ವರೆಗೆ ಯೋಗ ದಿನದ ವಿಶೇಷ ಕಾರ್ಯಕ್ರಮ, ಆಯೋಜಿಸಲಿದೆ ಎಂದರು. ಆಯುಷ್ಮಾನ್ ಆರೋಗ್ಯ ಮಂದಿರಗಳಲ್ಲಿ, ಗ್ರಾಮೀಣ ಯೋಗ, ಭಾರತೀಯ ವಿಜ್ಞಾನ ಸಂಸ್ಥೆಯಲ್ಲಿ, ವಿಜ್ಞಾನ ಯೋಗ, ಬೆಂಗಳೂರಿನ ಕಿದ್ವಾಯಿ ಕ್ಯಾನ್ಸರ್ ಚಿಕಿತ್ಸಾ ಸಂಸ್ಥೆಯಲ್ಲಿ, ಕಾರ್ಸಿನೋ ಯೋಗ, ಮೈಸೂರಿನ ಜಯದೇವ ಹೃದಯ ಆರೋಗ್ಯ ಆಸ್ಪತ್ರೆಯಲ್ಲಿ, ಕಾರ್ಡಿಯೋ ಯೋಗ, ಮೈಸೂರಿನ ಸರ್ಕಾರಿ ಆಯುರ್ವೇದ ಸಂಶೋಧನಾ ಕೇಂದ್ರದಲ್ಲಿ, ರಾಷ್ಟ್ರೀಯ ಯೋಗ ಮತ್ತು ವಿದ್ಯಾರ್ಥಿ ಯೋಗ ಕಾರ್ಯಕ್ರಮಗಳು ನಡೆಯಲಿವೆ ಎಂದು, ಸಚಿವ ದಿನೇಶ ಗುಂಡೂರಾವ, ತಿಳಿಸಿದರು.

<><><>

**ಬೆಂಗಳೂರು, ಕೃಷಿ ವಿಶ್ವವಿದ್ಯಾನಿಲಯದ,** 60ನೇ ಘಟಿಕೋತ್ಸವ ಸಮಾರಂಭ, ಇಂದು ಬೆಳಗ್ಗೆ 11:30ಕ್ಕೆ, ಗಾಂಧಿ ಕೃಷಿ ವಿಜ್ಞಾನ ಕೇಂದ್ರದ, ಡಾಕ್ಟರ್ ಬಾಬು ರಾಜೇಂದ್ರ ಪ್ರಸಾದ, ಅಂತಾರಾಷ್ಟ್ರೀಯ ಸಮಾವೇಶ ಭವನದಲ್ಲಿ, ಆರಂಭವಾಗಿದೆ. ರಾಜ್ಯಪಾಲ ಥಾವರಚಂದ ಗೆಹ್ಲೋಟ, ಪದವಿಗಳನ್ನು ಪ್ರದಾನಿಸಲಿದ್ದಾರೆ.

<><><>

**ಚಿನ್ನ, ಇಂಧನ ಖರೀದಿ ಹಾಗೂ ವಿದೇಶ ಪ್ರವಾಸ** ಮಿತಗೊಳಿಸುವಂತೆ, ಪ್ರಧಾನಮಂತ್ರಿ ನರೇಂದ್ರ ಮೋದಿ ಮನವಿ ಮಾಡಿದ್ದಾರೆ; ಒತ್ತಡ ಹೇರಿಲ್ಲ ಎಂದು, ವಿಧಾನಸಭೆ ಪ್ರತಿಪಕ್ಷ ನಾಯಕ, ಆರ್.ಅಶೋಕ ಹೇಳಿದ್ದಾರೆ. ಬೆಂಗಳೂರಿನ, ಮಲ್ಲೇಶ್ವರದ ಬಿಜೆಪಿ ಕಚೇರಿಯಲ್ಲಿ ಮಾತನಾಡಿದ ಅವರು, ಬೆಂಗಾವಲು ವಾಹನ, ಸ್ವಂತದ ಕಾರುಗಳಿಗೆ ಬಳಸುವ, ಪೆಟ್ರೋಲ, ಡೀಸೆಲ್ ಪ್ರಮಾಣವನ್ನು, ಶೇಕಡ 30 ರಿಂದ ಶೇಕಡ 50ರಷ್ಟು ಕಡಿಮೆ ಮಾಡಲಿದ್ದೇವೆ ಎಂದರು. ಕೇಂದ್ರದ ಸಚಿವರು, ಪ್ರಧಾನಮಂತ್ರಿ ಅವರ ಕರೆಗೆ ಓಗೊಟ್ಟು, ಮೆಟ್ರೋದಂಥ ಸಾಮೂಹಿಕ ಸಾರಿಗೆ ವ್ಯವಸ್ಥೆ ಬಳಸಲು ಮುಂದಾಗಿದ್ದಾರೆ, ಎಂದರು.

<><><>

**ಧಾರವಾಡ ಜಿಲ್ಲೆ, ಕಲಘಟಗಿ ತಾಲೂಕು,** ಸೂರಶೆಟ್ಟಿಕೊಪ್ಪದ ರೈತ ಮಹಿಳೆ, ಈರವ್ವ ಅಂಗಡಿ, ಗೃಹಲಕ್ಷ್ಮಿ ಯೋಜನೆಯ ಹಣ ಸದ್ಬಳಕೆ ಮಾಡಿಕೊಂಡು, ಮಾದರಿಯಾಗಿದ್ದಾರೆ. 29 ಕಂತುಗಳ ಗೃಹಲಕ್ಷ್ಮಿ ಹಣದಿಂದ, ತಮ್ಮ ಎರಡು ಎಕರೆ ಹೊಲದಲ್ಲಿ,

ಬೋರ್‌ವೆಲ್ ಕೊರೆಸಿದ್ದು, ಐದು ಇಂಚು ನೀರು ದೊರೆತಿದೆ. ಗೃಹಲಕ್ಷ್ಮಿ ಯೋಜನೆ ಹಣದಿಂದ, ತುಂಬ ಅನುಕೂಲವಾಗಿದೆ ಎಂದು, ಈರವ್ವ ಅಂಗಡಿ ತಿಳಿಸಿದ್ದಾರೆ.

<><><>

**ಹುಬ್ಬಳ್ಳಿ-ಧಾರವಾಡ ಮಹಾನಗರ** ಪಾಲಿಕೆಯನ್ನು ವಿಭಜಿಸಿ, ಧಾರವಾಡ ಪ್ರತ್ಯೇಕ ಪಾಲಿಕೆ ರಚನೆಗೆ ಒತ್ತಾಯಿಸಿ, ನಾಳೆಯಿಂದ ಪಾಲಿಕೆ ಕಚೇರಿ ಎದುರು, ಸತ್ಯ ಪ್ರತಿಪಾದನೆ ಸತ್ಯಾಗ್ರಹ ಜರುಗಲಿದೆ ಎಂದು, ಹಿರಿಯ ನ್ಯಾಯವಾದಿ ಬಿ.ಡಿ. ಹಿರೇಮಠ, ಧಾರವಾಡದಲ್ಲಿ ತಿಳಿಸಿದ್ದಾರೆ.

<><><>

**ಭಾರತೀಯ ವಿಶಿ ್ಟ ಗುರುತು ಪ್ರಾಧಿಕಾರದ,** ಹೊಸ ಯು.ಐ.ಡಿ.ಎ.ಐ. ಸೇವಾ ಕೇಂದ್ರ, ವಿಜಯಪುರದ ಆಶ್ರಮ ರಸ್ತೆಯಲ್ಲಿ, ಕಾರ್ಯಾರಂಭಿಸಿದೆ. ಆಧಾರ್ ಕಾರ್ಡ್ ಗೆ ಸಂಬಂಧಿಸಿದ, ಎಲ್ಲ ಸಮಸ್ಯೆಗಳನ್ನು ಪರಿಹರಿಸುವ ಕೇಂದ್ರ ಇದಾಗಿದೆ ಎಂದು, ಬೆಂಗಳೂರು ಪ್ರಾದೇಶಿಕ ಕಚೇರಿಯ ನಿರ್ದೇಶಕ, ಮನೋಜಕುಮಾರ ತಿಳಿಸಿದರು.

<><><>

**ಕೇಂದ್ರ ಶಿಕ್ಷಣ ಸಚಿವಾಲಯ,** ಯುವ ಸಂಗಮದಡಿ, "ಏಕ್ ಭಾರತ್ ಶ್ರೇ ೃ ಭಾರತ್" ಕಾರ್ಯಕ್ರಮ ಆಯೋಜಿಸಿದೆ. ಕಳೆದ 9ನೇ ತಾರೀಖಿನಿಂದ ಆರಂಭಗೊಂಡಿದ್ದು, ಇಂದು ಸಮಾರೋಪ ಗೊಳ್ಳಲಿದೆ. ಈ ಕಾರ್ಯಕ್ರಮ, ವಿದ್ಯಾರ್ಥಿಗಳಿಗೆ ದೇಶದ ವಿಭಿನ್ನ ಭಾಗಗಳ ಸಮೃದ್ಧ ಪರಂಪರೆ, ಸಂಸ್ಕೃತಿ, ಭಾ ೆ, ನವೋದ್ಯಮ ವ್ಯವಸ್ಥೆ ಮತ್ತು ಸಾಮಾಜಿಕ ಆಚರಣೆಗಳನ್ನು ಅರಿತುಕೊಳ್ಳುವ ಅವಕಾಶವನ್ನು ಒದಗಿಸುತ್ತದೆ. ಧಾರವಾಡದ, ಭಾರತೀಯ ಮಾಹಿತಿ ತಂತ್ರಜ್ಞಾನ ಸಂಸ್ಥೆ – ಟ್ರಿಪಲ್ ಐ.ಟಿ. ಹಾಗೂ ಜೈಪುರದ ಎಂ.ಎನ್.ಐ.ಟಿ. ನೋಡೆಲ್ ಸಂಸ್ಥೆಗಳಾಗಿ, 6ನೇ ಹಂತದ, ಯುವ ಸಂಗಮದ ಆತಿಥ್ಯ ವಹಿಸಿವೆ. ಇಂದು ಸಂಜೆ 5 ಗಂಟೆಗೆ, ಧಾರವಾಡದ ಟ್ರಿಪಲ್ ಐ.ಟಿ.ಯಲ್ಲಿ, ಸಮಾರೋಪ ಸಮಾರಂಭ ನಡೆಯಲಿದೆ.

<><><>

**ಆಕಾಶವಾಣಿ ಸಾರ್ಥಕ ಪ್ರಸಾರ ಸೇವೆಯ,** 90ನೇ ವರ್ಷಾಚರಣೆ ಹರ್ಷೋತ್ಸವದ ಹಿನ್ನೆಲೆ, ಆಕಾಶವಾಣಿ ಧಾರವಾಡ ಕೇಂದ್ರ, ನಾಳೆ, ಮೇ 15 ರಂದು, ಶುಕ್ರವಾರ ಸಂಜೆ 6.30ಕ್ಕೆ, ಆಲೂರು ವೆಂಕಟರಾವ ಸಾಂಸ್ಕೃತಿಕ ಸಭಾ ಭವನದಲ್ಲಿ, 'ಆಕಾಶವಾಣಿ @90 ಸಂಧ್ಯಾ ಸುಧೆ ಶಾಸ್ತ್ರೀಯ ಸಂಗೀತ' ಕಾರ್ಯಕ್ರಮ ಆಯೋಜಿಸಿದೆ. ಆಕಾಶವಾಣಿಯ ಎ ಶ್ರೇಣಿ ಶಾಸ್ತ್ರೀಯ ಸಂಗೀತ ಗಾಯಕ ರಘುನಂದನ ಭಟ್ ಹಾಗೂ ಬಿ ಹೈ ಶ್ರೇಣಿ ಬಾನ್ಸುರಿ ಕಲಾವಿದೆ ಕೃತಿಕಾ ಜಂಗಿನಮಠ, ಕೊಳಲು ವಾದನ ಪ್ರಸ್ತುತಪಡಿಸಲಿದ್ದಾರೆ.

<><><>

**ಆಕಾಶವಾಣಿ 90,** ವ ರ್ಚರಣೆ ಹಿನ್ನೆಲೆ, ಆಕಾಶವಾಣಿ ಕಾರವಾರ ಕೇಂದ್ರ, ನಾಳೆ ಬೆಳಗ್ಗೆ 7 ಗಂಟೆಗೆ, ಕಾರವಾರದ ರವೀಂದ್ರನಾಥ ಟಾಗೋರ್ ಕಡಲತೀರದಿಂದ, ಆಕಾಶವಾಣಿ ಕೇಂದ್ರದ ವರೆಗೆ ವಾಕಥಾನ್ ಜರುಗಲಿದೆ. ಜಿಲ್ಲಾಧಿಕಾರಿ ಕೆ.ಲಕ್ಷ್ಮಿಪ್ರಿಯಾ ಉದ್ಘಾಟಿಸಲಿದ್ದು, ಜಿಲ್ಲಾ ಪೊಲೀಸ್ ವರಿ ್ಠಾಧಿಕಾರಿ ದೀಪನ್ ಎಂ.ಎನ್. ಹಾಗೂ ಜಿಲ್ಲಾ ಪಂಚಾಯ್ತಿ ಸಿ.ಇ.ಓ. ಡಾಕ್ಟರ್ ದಿಲೀಶ್ ಶಶಿ ಹಾಗೂ ಸ್ವಯಂಸೇವಾ ಸಂಸ್ಥೆಗಳ ಪ್ರತಿನಿಧಿಗಳು ಮತ್ತಿತರರು ಭಾಗವಹಿಸಲಿದ್ದಾರೆ.

<><><>

**ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ,** ಜನಪ್ರಿಯ 'ಮನ್ ಕಿ ಬಾತ್'ನ 134ನೇ ಆವೃತ್ತಿ, ಈ ತಿಂಗಳ 31ರಂದು ಪ್ರಸಾರವಾಗಲಿದೆ. ನಾಗರಿಕರು ತಮ್ಮ ಅಭಿಪ್ರಾಯಗಳನ್ನು, ಈ ತಿಂಗಳ 29 ರೊಳಗೆ myGov.in ಜಾಲತಾಣ ಅಥವಾ 1800–11–7800 ಸಂಖ್ಯೆಗೆ ಕರೆ ಮಾಡಿ, ಹಂಚಿಕೊಳ್ಳಬಹುದು.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ.